## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಹರೀಶ್ ಕುಮಾರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸುಲೂರು ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14(ಎ) ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ **D.O.No.Compt/lok/BD/10421/2019/ARE-6,** ದಿನಾಂಕ:23-11-2020.

**ಪ್ರಸ್ತಾವನೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರ ಪತ್ರದೊಂದಿಗೆ ಕಳುಹಿಸಿರುವ ಮಾನ್ಯ ಲೋಕಾಯುಕ್ತ ರವರು ದಿನಾಂಕ:23–11–2020 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(3) ರನ್ವಯ ಸಲ್ಲಿಸಿರುವ ವರದಿಯಲ್ಲಿ ಶ್ರೀ ಅಂಬರೀಶ್ ಬಿನ್ ನಾರಾಯಣಪ್ಪ, ಚಲ್ಲಹಳ್ಳಿ ಗ್ರಾಮ ಕೋಲಾರ ತಾಲ್ಲೂಕು ರವರು ಕರ್ನಾಟಕ ಲೋಕಾಯುಕ್ಕೆ ದೂರು ಸಲ್ಲಿಸಿ ಕೋಲಾರ ತಾಲ್ಲೂಕು, ಸೂಲೂರು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀ ವಿ.ಸಿ ಒಡೆಯರ್ ಹಾಗೂ ಸದಸ್ಯರಾದ ಶ್ರೀಮತಿ ಸುಮಾ ರವಿಕುಮಾರ್ ರವರ ವಿರುದ್ಧ ಪ್ರಕರಣ ದಾಖಲಿಸಿದ್ದು, ಅರ್ಜಿಯಲ್ಲಿ ಮೇಲ್ಕಂಡವರು ಚಲ್ಲಹಳ್ಳಿ ಗ್ರಾಮದ ದಲಿತ ಕಾಲೋನಿಯಲ್ಲಿದ್ದ ಸುಮಾರು 150 ವರ್ಷಗಳ ಹಳೆಯ ಸರ್ಕಾರಿ ಅರಳೀ ಹಾಗೂ ಹುಣಸೇ ಮರಗಳನ್ನು ಅಕ್ರಮವಾಗಿ ಯಾವುದೇ ಇಲಾಖೆಯ ಅನುಮತಿ ಪಡೆಯದೆ ಕಟಾವು ಮಾಡಿಸಿ ಅಧಿಕ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕೋರಿ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರಿ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿರುತ್ತಾರೆ.

**ದೂರಿನ ಸಂಕ್ಷಿಪ್ತ ವಿವರಣೆ:–**

ಶ್ರೀ ಅಂಬರೀಶ್ ಬಿನ್ ನಾರಾಯಣಪ್ಪ, ಚಲ್ಲಹಳ್ಳಿ ಗ್ರಾಮ ಕೋಲಾರ ತಾಲ್ಲೂಕು ರವರು ಕರ್ನಾಟಕ ಲೋಕಾಯುಕ್ತಕ್ಕೆ ದೂರು ಸಲ್ಲಿಸಿ ಕೋಲಾರ ಸದಸ್ಯರಾದ ಸೂಲೂರು ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಶ್ರೀ ವಿ.ಸಿ.ಒಡೆಯಾರ್ ಹಾಗೂ ಸದಸ್ಯರಾದ ಶ್ರೀಮತಿ ಸುಮಾ ರವಿಕುಮಾರ್ ರವರ ವಿರುದ್ಧ ಪ್ರಕರಣ ದಾಖಲಿಸಿದ್ದು, ಅರ್ಜಿಯಲ್ಲಿ ಮೇಲ್ಕಂಡವರು ಚಲ್ಲಹಳ್ಳಿ ಗ್ರಾಮದ ದಲಿತ ಕಾಲೋನಿಯಲ್ಲಿದ್ದ ಸುಮಾರು 150 ವರ್ಷಗಳ ಹಳೆಯ ಸರ್ಕಾರಿ ಅರಳಿ ಹಾಗೂ ಹುಣಸೇ ಮರಗಳನ್ನು ಅಕ್ರಮವಾಗಿ ಯಾವುದೇ ಇಲಾಖೆಯ ಅನುಮತಿ ಪಡೆಯದೇ ಕಟಾವು ಮಾಡಿಸಿ ಅಧಿಕಾರ ಹಾಗೂ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂದು ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕೋರಿ ನೀಡಿರುವ ಅರ್ಜಿಯ ವಿಷಯದ ಸತ್ಯಾಂಶದ ಬಗ್ಗೆ ವಿಚಾರಣೆ ನಡೆಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸುವಂತೆ ಕೋಲಾರ ಲೋಕಾಯುಕ್ತದ ಪೋಲೀಸ್ ಉಪಾಧೀಕ್ಷಕರಿಗೆ ಸೂಚಿಸಲಾಗಿರುತ್ತದೆ.

1) ಈ ಪ್ರಕರಣದಲ್ಲಿ 1 ರಿಂದ 3ನೇ ಎದುರುದಾರರು ಈ ಕೆಳಕಂಡಂತೆ ಆಕ್ಷೇಪಣೆಯನ್ನು ಸಲ್ಲಿಸಿರುವುದು ಕಂಡು ಬರುತ್ತದೆ.

- The respondents 1 & 2 have submitted their common reply, where in they have denied and disputed the allegations made against them. They have

contended that, they have neither committed any dereliction of official duty/misconduct nor cut and sold the trees in question; the respondent No.3/ the PDO of the Panchayath was having absolute jurisdiction and powers to look after all these affairs. However, at his instance, since he wanted to come back to the same Panchayath as PDO, he has created this false incident and setup the complainants to file this false complaint. They also contended that, the respondent No.3 was arrested, when he was trying to receive the bride and since, they were objecting the illegal acts of the 3rd respondent, he has created this false incident. Accordingly, they prayed to close the complaint against them.

- The 3rd respondent in his reply has stated that, a resolution was passed for cutting and removing of three old tamarind trees, in accordance with law. However, the respondents 1 & 2 themselves have sold the remaining 12 trees and through the purchaser they got cut the trees and sold the same in favour of wood merchant, by assuring the people that the said amount would be utilized for the development of the village. He further contended that, after coming to know about this incident, he has given complaint to the Forest Department and accordingly, the Forest Department has registered a criminal case and the same is pending, he is not at all responsible for cutting and selling the trees in question and the same. Accordingly, he prayed to close the complaint.

- ವಿಚಾರಣೆ ಸಮಯದಲ್ಲಿ ಹೊರಪಟ್ಟಂತೆ ಕೋಲಾರ ತಾಲ್ಲೂಕು ಸೂಲೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಚಲ್ಲಹಳ್ಳಿ ಗ್ರಾಮದಲ್ಲಿ 2016 ನೇ ಸಾಲಿನಲ್ಲಿ ಗ್ರಾಮದ ಡೈರಿ ಕಟ್ಟಡ ಕಟ್ಟಲು ಖಾಲಿ ನಿವೇಶನದಲ್ಲಿದ್ದ 3 ಹುಣಸೇ ಮರಗಳನ್ನು ಕಟಾವು ಮಾಡಲು ಗ್ರಾಮಸ್ಥರು ಗ್ರಾಮ ಪಂಚಾಯ್ತಿಗೆ ಕೋರಿದ್ದು, ಕಾನೂನು ಬದ್ಧವಾಗಿ ಗ್ರಾಮ ಪಂಚಾಯ್ತಿ ಕಡೆಯಿಂದ ಅರಣ್ಯ ಇಲಾಖೆಯವರಿಗೆ ಕಳುಹಿಸಿ ಕಟಾವು ಮಾಡಲು ಕೋರಿರುತ್ತಾರೆ. ಡೈರಿ ಕಟ್ಟಲು ಮೂರು ಹುಣಸೇ ಮರಗಳನ್ನು ಕಟಾವು ಮಾಡಲು ಅರಣ್ಯ ಇಲಾಖೆಯಿಂದ ಅನುಮತಿ ಬಂದಿದ್ದು ಈ ಬಗ್ಗೆ ಗ್ರಾಮ ಪಂಚಾಯ್ತಿಯಲ್ಲಿ ಅನುಮೋದನೆ ಪಡೆದು ಮೂರು ಮರಗಳನ್ನು ಹರಾಜು ಹಾಕಲಿಕ್ಕೆ ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಿ ಹಾಗೆಯೇ ತಾಲ್ಲೂಕು ಪಂಚಾಯತ್ ಕಡೆಯಿಂದ ಹರಾಜು ಮಾಡಲು ಅನುಮತಿಯನ್ನು ಗ್ರಾಮ ಪಂಚಾಯ್ತಿ ಕಾರ್ಯಾಲಯದಿಂದ ಪಡೆದಿರುತ್ತಾರೆ. ದಿನಾಂಕ:25–05–2016 ರಂದು ಬೆಳಗ್ಗೆ 11–00 ಗಂಟೆಗೆ ಗ್ರಾಮ ಪಂಚಾಯ್ತಿಯ ಕಛೇರಿಯಲ್ಲಿ ಸದರಿ ಮೂರು ಹುಣಸೇ ಮರಗಳ ಹರಾಜು ಪ್ರಕ್ರಿಯೆ ಏರ್ಪಡಿಸಿದ್ದು ಕೋಲಾರದ ಮುಭಾರಕ್ ಎಂಬುವರು ಮೂರು ಮರಗಳನ್ನು ಒಟ್ಟಿಗೆ 20,000–00 ರೂಗಳಿಗೆ ಪಡೆದಿದ್ದು ಈ ಬಗ್ಗೆ ಗ್ರಾಮ ಪಂಚಾಯ್ತಿಯ ಬಳಿ ಹರಾಜು ಪ್ರಕ್ರಿಯೆ ನಡೆಸಿ, ಠರಾವನ್ನು ದಾಖಲಿಸಿ ಅದರಲ್ಲಿ ಸೂಲೂರು ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಹಾಗೂ ಇತರರು ಸಹಿಗಳನ್ನು ಮಾಡಿರುತ್ತಾರೆ ಮತ್ತು ಅದೇ ದಿನ ಹರಾಜಿನಿಂದ ಬಂದಂತಹ ಹಣವನ್ನು ಗ್ರಾಮ ಪಂಚಾಯ್ತಿಯ ಖಾತೆಗೆ ಜಮಾ ಮಾಡಿರುತ್ತಾರೆ.

- ಈ ಹರಾಜು ಪ್ರಕ್ರಿಯಯನ್ನು ದುರುಪಯೋಗ ಮಾಡಿಕೊಂಡಂತಹ ಸೂಲೂರು ಗ್ರಾಮ ಪಂಚಾಯ್ತಿಯ ಅಧ್ಯಕ್ಷರಾದ ವಿ.ಸಿ.ಒಡೆಯರ್ ಮತ್ತು ಚಲ್ಲಹಳ್ಳಿ ಗ್ರಾಮದ ಪಂಚಾಯ್ತಿ ಸದಸ್ಯರಾದ ಶ್ರೀಮತಿ ಸುಮಾ ರವಿಕುಮಾರ್ ರವರು ಚಲ್ಲಹಳ್ಳಿ ಗ್ರಾಮದ ಕಾಲೋನಿಯಲ್ಲಿದ್ದ 11 ಹುಣಸೇ ಮರಗಳನ್ನು ಹಾಗೂ ಒಂದು ಅರಳಿ ಮರವನ್ನು ಗ್ರಾಮದ ದೇವಸ್ಥಾನಕ್ಕೆ ಹಣ ನೀಡುತ್ತೇವೆಂದು ಹೇಳಿ ಯಾವುದೇ ಹರಾಜು ಮಾಡದೇ ಕೋಲಾರದ ಮುಬಾರಕ್ ಎಂಬ ಮರ ವ್ಯಾಪಾರಿಯೊಬ್ಬರಿಗೆ 1 ಲಕ್ಷ 35 ಸಾವಿರ ರೂ.ಗಳಿಗೆ ಮರಗಳನ್ನು ಮಾರಾಟ ಮಾಡಿದ್ದು, ದೇವಸ್ಥಾನಕ್ಕೆ ಹಣ ನೀಡದೇ ಸ್ವಂತಕ್ಕೆ ಹಣ ಬಳಸಿಕೊಂಡು ಅಧಿಕಾರ ದುರುಪಯೋಗ ಮಾಡಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ.

- ಈ ಬಗ್ಗೆ ಗ್ರಾಮಸ್ಥರು ಗ್ರಾಮ ಪಂಚಾಯ್ತಿಯವರಿಗೆ ಹಾಗೂ ಪೋಲೀಸರಿಗೆ ಮತ್ತುಅರಣ್ಯ ಇಲಾಖೆಯವರಿಗೆ ದೂರು ಸಲ್ಲಿಸಿ ಅರಣ್ಯ ಇಲಾಖೆಯಲ್ಲಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಶ್ರೀ ವಿ.ಸಿ.ಒಡೆಯರ್ ಮತ್ತು ಗ್ರಾಮ ಪಂಚಾಯ್ತಿ ಸದಸ್ಯರಾದ ಶ್ರೀಮತಿ ಸುಮಾ ರವಿಕುಮಾರ್ ರವರ ವಿರುದ್ಧ ಮೊಕದ್ದಮೆ ಸಂಖ್ಯೆ:14/2017-18 ದಿನಾಂಕ:07.02.2018ರಂದು ಪ್ರಕರಣ ದಾಖಲು ಮಾಡಿರುತ್ತಾರೆ. 2018ನೇ ಸಾಲಿನಲ್ಲಿ ಪ್ರಕರಣ ದಾಖಲಾಗಿದ್ದರೂ ಸಹ ಅರಣ್ಯ ಇಲಾಖೆಯವರು ಇದುವರೆಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ, ಪ್ರಕರಣ ದಾಖಲಾದ ಸಮಯದಲ್ಲಿ ಕೋಲಾರ ವಲಯ ಅರಣ್ಯ ಅಧಿಕಾರಿಯಾಗಿ ಶ್ರೀಮತಿ ಪರಿಮಳ ಹುಲಿಗಣ್ಣನವರ್ ರವರು ಕರ್ತವ್ಯ ನಿರ್ವಹಿಸುತ್ತಿದ್ದು ಹಾಲಿ ಗದಗದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಪ್ರಸ್ತುತ ಇರುವ ಅರಣ್ಯಾಧಿಕಾರಿಗಳಾದ ಸುರೇಶ್ ಬಾಬು ರವರು ಬಂದು 11 ತಿಂಗಳಾದರೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ, ಸೂಲೂರು ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಹರೀಶ್ ಕುಮಾರ್ ರವರು ಸಹ ಮರಗಳನ್ನು ಕಡಿಯುವ ಸಮಯದಲ್ಲಿ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಅರಣ್ಯ ಇಲಾಖೆಯವರು ಹಾಗೂ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷತೆ ತೋರ್ಪಡಿಸಿರುವುದು ಕಂಡು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ.

- ಅರ್ಜಿ ವಿಚಾರಣೆಯ ಸಮಯದಲ್ಲಿ ಸಾಕ್ಷಿದಾರರ ಹಾಗೂ ಸ್ಥಳ ಪರಿಶೀಲನೆ ಮತ್ತು ದಾಖಲೆಗಳ ಪರಿಶೀಲನೆಯಿಂದ ಹೊರಪಟ್ಟ ವಿಚಾರವೇನೆಂದರೆ, ಚಲ್ಲಹಳ್ಳಿ ಗ್ರಾಮದಲ್ಲಿ 2016 ನೇ ಸಾಲಿನಲ್ಲಿ ಗ್ರಾಮದ ಡೈರಿ ಕಟ್ಟಡ ಕಟ್ಟಲು ಖಾಲಿ ನಿವೇಶನದಲ್ಲಿದ್ದ 3 ಹುಣಸೇ ಮರಗಳನ್ನು ಕಟಾವು ಮಾಡಲು ಗ್ರಾಮಸ್ಥರು ಕೋರಿದ್ದರ ಮೇರೆಗೆ ಕಾನೂನು ಬದ್ಧವಾಗಿ ಕಟಾವು ಮಾಡಿಸಿದ್ದು, ಇದನ್ನು ದುರುಪಯೋಗ ಮಾಡಿಕೊಂಡಂತಹ ಸೂಲೂರು ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಶ್ರೀ ವಿ.ಸಿ.ಒಡೆಯರ್ ಮತ್ತು ಚಲ್ಲಹಳ್ಳಿ ಗ್ರಾಮದ ಪಂಚಾಯ್ತಿ ಸದಸ್ಯೆ ಸುಮಾ ರವರು ದಲಿತ ಕಾಲೋನಿಯಲ್ಲಿದ್ದ 11 ಹುಣಸೇ ಮರಗಳನ್ನು ಹಾಗೂ ಒಂದು ಅರಳಿ ಮರವನ್ನು ದೇವಸ್ಥಾನಕ್ಕೆ ಹಣ ನೀಡುತ್ತೇವೆಂದು ಗ್ರಾಮಸ್ಥರಿಗೆ ಹೇಳಿ ಅಕ್ರಮವಾಗಿ ಯಾವುದೇ ಇಲಾಖೆಯ ಅನುಮತಿಯನ್ನು ಪಡೆಯದೇ ಕಾನೂನಿಗೆ ವಿರುದ್ಧವಾಗಿ ಮರಗಳನ್ನು ಕೋಲಾರದ ವಾಸಿ ಶ್ರೀ ಮುಬಾರಕ್ ಬಿನ್ ಅಬ್ದುಲ್ ಅತೀಪ್ ರವರಿಗೆ 1 ಲಕ್ಷ 35 ಸಾವಿರ ರೂ. ಗಳಿಗೆ ಮಾರಾಟ ಮಾಡಿ ಹಣವನ್ನು ಗ್ರಾಮ ಪಂಚಾಯ್ತಿ ನಿಧಿಗೆ ನೀಡದೇ ಸ್ವಂತಕ್ಕೆ ಬಳಸಿಕೊಂಡು ಹಣ ಮತ್ತು ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ.

ಈ ಪ್ರಕರಣದಲ್ಲಿ 3ನೇ ಎದುರುದಾರರಾದ ಶ್ರೀ ಹರೀಶ್ ಕುಮಾರ್ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸೂಲೂರು ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ ಇವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ( ನಡೆತ) ನಿಯಮಾವಳಿ, 1966ರ ನಿಯಮ 3(i) ರಿಂದ (iii) ಅಡಿಯಲ್ಲಿ ದುರ್ನಡತೆ/ದುರ್ವರ್ತತೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ12(3)ರ ಅಡಿ ಪದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮೇಲ್ಮನವಿ) ನಿಯಮ 1957ರಡಿ ತಮ್ಮ ಸಂಸ್ಥೆಗೆ ವಹಿಸಬೇಕೆಂದು ಹಾಗೂ

1 ನೇ ಎದುರುದಾರರಾದ ಶ್ರೀ ಒಡೆಯರ್, ಅಧ್ಯಕ್ಷರು ಸೂಲೂರು ಗ್ರಾಮ ಪಂಚಾಯಿತಿ, ಹಾಗೂ 2ನೇ ಎದುರುದಾರರಾದ ಶ್ರೀಮತಿ ಸುಮಾ ರವಿಕುಮಾರ್, ಸದಸ್ಯರು, ಸೂಲೂರು ಗ್ರಾಮ ಪಂಚಾಯಿತಿ ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ಮತ್ತು 48(4) ರನ್ವಯ ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡಿರುತ್ತಾರೆ.

(6)

ದೂರುದಾರರು ದೂರು ಹಾಗೂ ತನಿಖಾಧಿಕಾರಿಗಳ ವರದಿ ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ "1, 2 ಮತ್ತು 3ನೇ ಎದುರುದಾರರ' ವಿರುದ್ಧ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, 1ನೇ ಎದುದಾರರಾದ- ಶ್ರೀ ವಿ.ಸಿ ಒಡೆಯರ್, ಅಧ್ಯಕ್ಷರು, ಸೂಲೂರು ಗ್ರಾಮ ಪಂಚಾಯಿತಿ 2ನೇ ಎದುರುದಾರರಾದ ಶ್ರೀಮತಿ ಸುಮಾ ರವಿಕುಮಾರ್, ಸದಸ್ಯರು, ಸೂಲೂರು ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43-ಎ(vi)ರನ್ವಯ ವಿಚಾರಣೆ ನಡೆಸಲು ಪ್ರಾದೇಶಿಕ ಆಯುಕ್ತರು, ಬೆಂಗಳೂರು ಪ್ರಾದೇಶಿಕ ವಿಭಾಗ, ಬೆಂಗಳೂರು ರವರಿಗೆ ವಹಿಸಲು ಹಾಗೂ 3ನೇ ಎದುರುದಾರರಾದ ಶ್ರೀ ಹರೀಶ್‌ಕುಮಾರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸೂಲೂರು ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ ರವರು ಸರ್ಕಾರಿ ನೌಕರರಿಗೆ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಮಾನ್ಯ ಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ರವರ ಶಿಫಾರಸ್ಸಿನಂತೆ ಕರ್ನಾಟಕ ನಾಗರೀಕ ಸೇವಾ ನಿಯಮ 1957 ರ ನಿಯಮ 14-ಎ ರಡಿಯಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/237/ಗ್ರಾಪಂಕಾ/2020, ಬೆಂಗಳೂರು, ದಿನಾಂಕ:-20-01-2021.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಹರೀಶ್ ಕುಮಾರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸುಲೂರು ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14(ಎ) ರಡಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರು ರವರಿಗೆ ವಹಿಸಿ ಆದೇಶಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು ಆಪಾದಿತರಿಗೆ ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

B. Naveenkumar 20/01/21
(ಬಿ.ನವೀನ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಬೆಂಗಳೂರು, ಕರ್ನಾಟಕ.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ:1 ರಿಂದ 164 ರವರೆಗೆ ಮೂಲ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಹಿಂದಿರುಗಿಸಿದೆ).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕೋಲಾರ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಕೋಲಾರ.
6. ಶ್ರೀ ಹರೀಶ್ ಕುಮಾರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸುಲೂರು ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ
7. ಗಣಕ ಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

*******